ಜೂನ್-2022

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ

**ವಾರ್ತಾಪತ್ರ**

## "Jal Andolan"




ಗ್ರಾಮೀಣ ಭಾರತದ ಪ್ರತಿಯೊಬ್ಬರಿಗೂ ಶುದ್ಧ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಮಹಾದುದ್ದೇಶದಿಂದ ದೇಶಾದ್ಯಂತ ಆರಂಭವಾಗಿರುವ **ಜಲ ಜೀವನ್ ಮಿಷನ್** ಯೋಜನೆಯುನ್ನು ರಾಜ್ಯದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅನುಷ್ಠಾನ ಮಾಡುತ್ತಿದೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು **ಸ್ವಚ್ಛ ಭಾರತ್ ಮಿಷನ್(ಗ್ರಾ)** ಮತ್ತು **ಜಲ ಜೀವನ್ ಮಿಷನ್** ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದ್ದು ಯೋಜನೆಗಳ ವಿವಿಧ ಘಟಕಾಂಶಗಳ ಕುರಿತು ಜನಸಾಮಾನ್ಯರಿಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಪರಿಣಾಮಕಾರಿ **ಐ.ಇ.ಸಿ** ಚಟುವಟಿಕೆಗಳನ್ನು ರೂಪಿಸುವ ಜೊತೆಗೆ ಅನುಷ್ಠಾನ ಮಾಡುತ್ತಾ ಬಂದಿರುತ್ತದೆ. ಮುಂದುವರೆದು ಇಲಾಖೆಯ ಕಾರ್ಯಕ್ರಮಗಳು ಬಹುಬೇಗನೆ ಜನಸಾಮಾನ್ಯರನ್ನು ತಲುಪುವಲ್ಲಿ ಪರಿಣಾಮಕಾರಿಯಾಗಿರುವ ವಿವಿಧ ಸಾಮಾಜಿಕ ಮಾಧ್ಯಮಗಳಾದ **ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ, ಯೂಟ್ಯೂಬ್** ಮತ್ತು **ವೆಬ್‌ಸೈಟ್** ಇತ್ಯಾದಿಗಳನ್ನು ನಿರ್ವಹಣೆ ಮಾಡುತ್ತಾ ಬಂದಿದೆ. ಮುಂದುವರೆದು ಕೇಂದ್ರ ಸರ್ಕಾರವು **ಜಲ ಜೀವನ್ ಮಿಷನ್** ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜನಾಂದೋಲನವನ್ನು ಆಯೋಜಿಸಿದ್ದು, ವಿವಿಧ ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಯೋಜನೆಯ ಘಟಕಾಂಶಗಳು ಮತ್ತು ಯೋಜನೆಯ ಬಗ್ಗೆ ಜಾಗೃತಿ ಮೂಡಿಸುವಂತೆ ತಿಳಿಸಲಾಗಿದ್ದು, ಈ ನಿಟ್ಟಿನಲ್ಲಿ ಇಲಾಖೆಯ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಜನಾಂದೋಲನ ಅಭಿಯಾನವನ್ನು ಆರಂಭಿಸಲಾಗಿದೆ.

# ತರಬೇತಿ ಕಾರ್ಯಕ್ರಮಗಳು

## "SBM-G Progress Review and Workshop"

**ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ ವಿವಿಧ ಘಟಕಾಂಶಗಳ ಅನುಷ್ಠಾನ ಮತ್ತು ಪ್ರಗತಿ ಸಂಬಂಧ 22 ಮತ್ತು 23ನೇ ಜೂನ್ ಗಳಂದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಎಲ್ಲಾ ಜಿಲ್ಲೆಗಳ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ **Nodal Officers and SLWM** ಸಮಾಲೋಚಕರುಗಳಿಗೆ 2 ದಿನಗಳ ಪ್ರಗತಿ ಪರಿಶೀಲನಾ ಸಭೆ ಮತ್ತು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ನಿರ್ದೇಶಕರು, ಗ್ರಾ.ಕು.ನೀ ಮತ್ತು ನೈ ಇಲಾಖೆ ಉದ್ಘಾಟಿಸಿದರು. ಈ ವೇಳೆ ಉಪ ಕಾರ್ಯದರ್ಶಿ (ಅಭಿವೃದ್ಧಿ), ನಿರ್ದೇಶಕರು (ಐ.ಎಸ್.ಎ) ಸೇರಿದಂತೆ ರಾಜ್ಯ ಕಚೇರಿಯ ವಿಷಯ ತಜ್ಞರುಗಳು ಶಿಬಿರಾರ್ಥಿಗಳಿಗೆ ತರಬೇತಿ ನೀಡಿದರು.





## "Orientation on JJM"




**ಜಲ ಜೀವನ್ ಮಿಷನ್** ಯೋಜನೆಯ ಗುರಿ ಮತ್ತು ಉದ್ದೇಶದಂತೆ ಗ್ರಾಮೀಣ ಪ್ರದೇಶದ ಪ್ರತಿಯೊಂದು ಕುಟುಂಬಕ್ಕೂ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರನ್ನು, ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಮೂಲಕ ಒದಗಿಸುವ ಕಾರ್ಯ ರಾಜ್ಯಾದ್ಯಂತ ಪ್ರಗತಿಯಲ್ಲಿದೆ. ಸದರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ದಿನಾಂಕ:27-06-2022 ರಂದು ಬೆಂಗಳೂರಿನಲ್ಲಿ ಎಲ್ಲಾ ಜಿಲ್ಲೆಗಳ ಕಾರ್ಯಪಾಲಕ ಅಭಿಯಂತರರು ಮತ್ತು ಗುತ್ತಿಗೆದಾರರಿಗೆ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಉದ್ಘಾಟಿಸಿದರು. ಈ ವೇಳೆ ನಿರ್ದೇಶಕರು, ಗ್ರಾ.ಕು.ನೀ ಮತ್ತು ನೈ ಇಲಾಖೆ, ಮುಖ್ಯ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ ಇಲಾಖೆ ಸೇರಿದಂತೆ ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ ಮತ್ತು ನೈ ಇಲಾಖೆ ಕಾರ್ಯಾಗಾರದಲ್ಲಿ ಹಾಜರಿದ್ದು, ಯೋಜನೆಯ ಅನುಷ್ಠಾನದ ವೇಳೆ ಜಿಲ್ಲೆಗಳಲ್ಲಾಗುತ್ತಿರುವ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಹಾಗೂ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಮಾಹಿತಿ ನೀಡಿದರು.





## "Training on Social Behavior Change Communication"



ನೀರು ಮತ್ತು ನೈರ್ಮಲ್ಯ ವಿಷಯಕ್ಕೆ ಸಂಬಂಧಿಸಿದಂತೆ, ಸಾಮಾಜಿಕ ನಡತೆಯ ಬದಲಾವಣೆಯಲ್ಲಿ ಸಂವಹನ ವಿಷಯ ಕುರಿತು **ಯುನಿಸೆಫ್** ಸಹಯೋಗದೊಂದಿಗೆ National Institute of Rural Development and Panchayath Raj ಇಲಾಖೆ ಆಯೋಜಿಸಿದ್ದ 2 ದಿನಗಳ ತರಬೇತಿ ಕಾರ್ಯಾಗಾರವು Institute of Rural Development and Panchayath Raj, Hyderabad ನಲ್ಲಿ 28 ಮತ್ತು 29ನೇ ಜೂನ್-2022 ರಂದು ನಡೆಯಿತು. ಈ ಎರಡು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ರಾಜ್ಯದಿಂದ ಆಯ್ದ 15 ಜಿಲ್ಲೆಗಳ **ಎಸ್.ಬಿ.ಎಂ(ಜಿ)** ಮತ್ತು **ಜೆ.ಜೆ.ಎಂ** ಸಮಾಲೋಚಕರು ಭಾಗವಹಿಸಿದ್ದರು. ಇದಿಷ್ಟೇ ಅಲ್ಲದೆ ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಿಂದಲೂ ಆಯ್ದ ಸಮಾಲೋಚಕರುಗಳು ಮತ್ತು ಅಧಿಕಾರಿಗಳು ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.





## "ಜಲ ಜೀವನ್ ಮಿಷನ್ ಯೋಜನೆ ಕುರಿತ ಕಾರ್ಯಾಗಾರ"



ಗ್ರಾಮೀಣ ಪ್ರದೇಶದ ಪ್ರತಿಯೊಂದು ಕುಟುಂಬಕ್ಕೆ **ಕಾರ್ಯಾತ್ಮಕ ನಳ ಸಂಪರ್ಕ** ಕಲ್ಪಿಸುವ ಮೂಲಕ ತಲಾ 55 ಲೀಟರ್ ಶುದ್ಧ ಸುರಕ್ಷಿತ ನೀರನ್ನು ಒದಗಿಸುವ ಮೂಲ ಉದ್ದೇಶದಿಂದ ದೇಶಾದ್ಯಂತ **ಜಲ ಜೀವನ್ ಮಿಷನ್** ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ರಾಜ್ಯದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಈ ಯೋಜನೆಯನ್ನು ಅನುಷ್ಠಾನ ಮಾಡುತ್ತಿದ್ದು, ಈ ಸಂಬಂಧ ಗ್ರಾಮೀಣ ಕರ್ನಾಟಕದ ಜನರಿಗೆ ಯೋಜನೆಯ ಬಗ್ಗೆ ಮಾಹಿತಿ ನೀಡುವ ಸಲುವಾಗಿ **ಅನುಷ್ಠಾನ ನೆರವು ಸಂಸ್ಥೆಗಳನ್ನು (ISA)** ಇಲಾಖೆಯಡಿ ಜಿಲ್ಲೆಗಳಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. ಮುಂದುವರೆದು ತಾಲೂಕುಗಳಲ್ಲಿ **ISRA**ಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಬಳ್ಳಾರಿ, ವಿಜಯನಗರ ಮತ್ತು ರಾಯಚೂರಿನಲ್ಲಿ ನೂತನವಾಗಿ ನೇಮಕವಾಗಿರುವ **ISRA** ಗಳ ತಂಡದ ಸದಸ್ಯರುಗಳಿಗೆ ರಾಯಚೂರಿನಲ್ಲಿ ಮೂರು ದಿನಗಳ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ರಾಯಚೂರು ಇವರು ಉದ್ಘಾಟಿಸಿದರು. ದಿನಾಂಕ 29, 30 ನೇ ಜೂನ್ ಮತ್ತು 1ನೇ ಜುಲೈರಂದು ನಡೆಯುತ್ತಿರುವ ತರಬೇತಿ ಕಾರ್ಯಾಗಾರದಲ್ಲಿ ರಾಜ್ಯ ಕಚೇರಿಯ **IEC, HRD and UNICEF** ಸಮಾಲೋಚಕರುಗಳು ಶಿಬಿರಾರ್ಥಿಗಳಿಗೆ ತರಬೇತಿ ನೀಡಿದರು.



